ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಪ್ರಚಲಿತ ಘಟನೆಗಳು – 2024

2024 ಸೆಪ್ಟೆಂಬರ್ 28 ರಂದು ದ್ರೋಣಾಚಾರ್ಯ ಅಕಾಡೆಮಿಯಲ್ಲಿ (ಆನ್‌ಲೈನ್ ಪರೀಕ್ಷೆ) ನಡೆದ 100 ಅಂಕಗಳ ಪ್ರಚಲಿತ ಘಟನೆಗಳ ಪ್ರಶ್ನೆಗಳು ಮತ್ತು ಉತ್ತರಗಳು

ದ್ರೋಣಾಚಾರ್ಯ ಅಕಾಡೆಮಿ – ಬೆಂಗಳೂರು

ಪ್ರಚಲಿತ ಘಟನೆಗಳು – 2024

ವಿಶೇಷವಾಗಿ ಗಮನಿಸಿ –

ಈ ಪಿಡಿಎಫ್‌ನಲ್ಲಿರುವ ಪ್ರಶ್ನೆಗಳು ಮತ್ತು ಉತ್ತರಗಳು **2024 ನವೆಂಬರ್ 11** ರವರೆಗೆ ಅಪ್‌ಡೇಟ್ ಮಾಡಲಾಗಿದೆ. (ಈ ಆನ್‌ಲೈನ್ ಟೆಸ್ಟ್ ಸಿರೀಸ್ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 9900476218 ವಾಟ್ಸಪ್ ನಂಬರ್‌ಗೆ ತಿಳಿಸಿ)

1. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) 2022ರ 5ನೇ ಆವೃತ್ತಿಯ ಪ್ರಕಾರ ಭಾರತವು ಒಟ್ಟು 3,682 ಹುಲಿಗಳನ್ನು ಹೊಂದಿದೆ.

ಬಿ) 2022ರ ವರದಿಯ ಪ್ರಕಾರ ಭಾರತದಲ್ಲಿ ಮಧ್ಯಪ್ರದೇಶ ರಾಜ್ಯವು ಅತಿ ಹೆಚ್ಚು ಹುಲಿಗಳನ್ನು (785 ಹುಲಿಗಳು) ಹೊಂದಿದ ಮೊದಲ ರಾಜ್ಯವಾಗಿದೆ. ನಂತರ ಕರ್ನಾಟಕ ಎರಡನೇ ಸ್ಥಾನದಲ್ಲಿದೆ (563 ಹುಲಿಗಳು) ಮತ್ತು ಉತ್ತರಾಖಂಡ್ ರಾಜ್ಯ (560 ಹುಲಿಗಳು) ಮೂರನೇ ಸ್ಥಾನದಲ್ಲಿದೆ.

ಸಿ) ಅಂತಾರಾಷ್ಟ್ರೀಯ ಹುಲಿ ದಿನವನ್ನು ಜೂನ್ 29ರಂದು ಆಚರಿಸಲಾಗುತ್ತದೆ.

ಡಿ) ಚಾಮರಾಜನಗರ ಜಿಲ್ಲೆಯ ಬಂಡಿಪುರದಲ್ಲಿ ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಹುಲಿಗಳು ಇವೆ.

ಉತ್ತರ: ಸಿ) ಅಂತಾರಾಷ್ಟ್ರೀಯ ಹುಲಿ ದಿನವನ್ನು ಜೂನ್ 29ರಂದು ಆಚರಿಸಲಾಗುತ್ತದೆ.

ವಿವರಣೆ – ಅಂತಾರಾಷ್ಟ್ರೀಯ ಹುಲಿ ದಿನ – ಜುಲೈ 29

2. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್ ಅನ್ನು ಕೇಂದ್ರದ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ರವರು 2024 ಜುಲೈ 23 ರಂದು ಲೋಕಸಭೆಯಲ್ಲಿ ಮಂಡಿಸಿದರು.

2) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್‌ನ ಗಾತ್ರ ₹ 48.21 ಲಕ್ಷ ಕೋಟಿ ರೂ.

3) 2024–25ರ ಕೇಂದ್ರದ ಪೂರ್ಣ ಪ್ರಮಾಣದ ಬಜೆಟ್ ಮಹಿಳೆಯರು, ಬಡವರು, ಯುವಕರು ಮತ್ತು ರೈತರನ್ನು ಕೇಂದ್ರೀಕರಿಸಿಕೊಂಡು ರೂಪಿಸಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ

3. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023–24ರ ಭಾರತದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯನ್ನು 2024 ಜುಲೈ 12 ರಂದು ನೀತಿ ಆಯೋಗದ ಉಪಾಧ್ಯಕ್ಷರಾದ ಸುಮನ್ ಕೆ. ಬೆರಿರವರು ಬಿಡುಗಡೆ ಮಾಡಿದರು.

2) 2023–24ರ ಸೂಚ್ಯಂಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಒಟ್ಟಾರೆ ಸಾಧನೆಯಲ್ಲಿ ಭಾರತದ ಸೂಚ್ಯಂಕ 66 ಆಗಿರುತ್ತದೆ.

3) 2023–24ರ ಭಾರತದ ಸುಸ್ಥಿರ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಉತ್ತರಾಖಂಡ್ ರಾಜ್ಯ ಮತ್ತು ಕೇರಳ ರಾಜ್ಯ 79 ಅಂಕಗಳನ್ನು ಪಡೆಯುವುದರ ಮೂಲಕ ಮೊದಲ ಸ್ಥಾನದಲ್ಲಿವೆ. ಕರ್ನಾಟಕ ಈ ಪಟ್ಟಿಯಲ್ಲಿ 75 ಅಂಕಗಳನ್ನು ಪಡೆಯುವುದರ ಮೂಲಕ 5ನೇ ಸ್ಥಾನದಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 3 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 3 ಸರಿಯಾಗಿವೆ.

ವಿವರಣೆ – 2023–24ರ ಸೂಚ್ಯಂಕದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಒಟ್ಟಾರೆ ಸಾಧನೆಯಲ್ಲಿ ಭಾರತದ ಸೂಚ್ಯಂಕ 71 ಆಗಿರುತ್ತದೆ.

4. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಕೇಂದ್ರದ 33ನೇ ಸಂಪುಟ ಕಾರ್ಯದರ್ಶಿಯಾಗಿ ತಮಿಳುನಾಡು ರಾಜ್ಯದ ಖೇಡರ್‌ನ 1987ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಟಿ.ವಿ ಸೋಮನಾಥನ್‌ರವರು 2024 ಆಗಸ್ಟ್ 30 ರಂದು ಅಧಿಕಾರ ಸ್ವೀಕರಿಸಿದರು.

2) ಕೇಂದ್ರದ ಕ್ಯಾಬಿನೆಟ್ ಕಾರ್ಯದರ್ಶಿ ಹುದ್ದೆ ಭಾರತದ ಐಎಎಸ್ ಅಧಿಕಾರಿಗಳಲ್ಲಿ ಅತಿ ದೊಡ್ಡ ಹುದ್ದೆಯಾಗಿದೆ.

3) ರಾಜೀವ್ ಕುಮಾರ್‌ರವರು ಭಾರತದ 32ನೇ ಸಂಪುಟ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ 2024 ಆಗಸ್ಟ್ 30 ರಂದು ನಿವೃತ್ತಿಯಾದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಬಿ) 1 ಮತ್ತು 2 ಸರಿಯಾಗಿವೆ.

ವಿವರಣೆ – ಭಾರತದ 32ನೇ ಸಂಪುಟ ಕಾರ್ಯದರ್ಶಿ – ರಾಜೀವ್ ಗೌಬಾ

ಕರ್ನಾಟಕ ಬಜೆಟ್ 2024–25ರ ತರಗತಿಗಳು – **Santhosh H R Sir**

https://dhronacharyaacademy.com/courses/sbv/

ಸಾಮಾನ್ಯ ಅರ್ಥಶಾಸ್ತ್ರ – 8, 9, 10 ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮ ಆಧಾರಿತ 50 ಘಂಟೆಗಳ ಸಂಪೂರ್ಣ ತರಗತಿಗಳು

Mohammed Taslim Sir

https://dhronacharyaacademy.com/general-economics-1/

ಸಾಮಾನ್ಯ ಅಧ್ಯಯನ ತರಗತಿಗಳು – **ANAND SIR GK**

https://dhronacharyaacademy.com/general-knowledge/

ಇಂಗ್ಲೀಷ್ ತರಗತಿಗಳು – **K. Kattimani SIR**

https://dhronacharyaacademy.com/english/

5. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿ 2006ರಲ್ಲಿ ನೊಬೆಲ್ ಶಾಂತಿ ಪ್ರಶಸ್ತಿ ಪಡೆದ ಮೊಹಮ್ಮದ್ ಯೂನಸ್‌ರವರು ಬಾಂಗ್ಲಾದೇಶದ ಅಧ್ಯಕ್ಷರಾದ ಮೊಹಮ್ಮದ್ ಶಹಾಬುದ್ದೀನ್‌ರವರಿಂದ 2024 ಆಗಸ್ಟ್ 8 ರಂದು ಪ್ರಮಾಣ ವಚನ ಸ್ವೀಕರಿಸಿದರು.

2) ಶೇಖ್ ಹಸೀನಾರವರು ಬಾಂಗ್ಲಾದೇಶದ ಮಾಜಿ ಪ್ರಧಾನಮಂತ್ರಿಗಳು.

3) ಬಾಂಗ್ಲಾದೇಶದಲ್ಲಿ ಮೀಸಲಾತಿ ನೀತಿ ವಿರೋಧಿಸಿ ಹಿಂಸಚಾರ ನಡೆದಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 1 ಮತ್ತು 2 ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ : ಡಿ) 1, 2 ಮತ್ತು 3 ಸರಿಯಾಗಿವೆ.

6. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 26 ರಿಂದ ಆಗಸ್ಟ್ 11ರವರೆಗೆ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್‌ನಲ್ಲಿ 33ನೇ ಒಲಿಂಪಿಕ್ಸ್ ಕ್ರೀಡಾಕೂಟಗಳು ನಡೆದವು.

2) 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ ಪದಕಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಅಮೆರಿಕ, ಎರಡನೇ ಸ್ಥಾನದಲ್ಲಿ ಚೀನಾ, ಮೂರನೇ ಸ್ಥಾನದಲ್ಲಿ ಜಪಾನ್, ನಾಲ್ಕನೇ ಸ್ಥಾನದಲ್ಲಿ ಆಸ್ಟ್ರೇಲಿಯಾ ಮತ್ತು 69ನೇ ಸ್ಥಾನದಲ್ಲಿ ಭಾರತವಿದೆ.

3) 2024ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಒಂದು ಬೆಳ್ಳಿಯ ಪದಕ ಮತ್ತು ಐದು ಕಂಚಿನ ಪದಕಗಳನ್ನು ಪಡೆದಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿವೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1 ಮತ್ತು 3 ಸರಿಯಾಗಿವೆ.

ಉತ್ತರ : ಸಿ) 1 ಮತ್ತು 3 ಸರಿಯಾಗಿವೆ.

ವಿವರಣೆ – ಭಾರತ ಪದಕಗಳ ಪಟ್ಟಿಯಲ್ಲಿ 71ನೇ ಸ್ಥಾನದಲ್ಲಿದೆ.

7. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ನೀರಜ್ ಚೋಪ್ರಾ	I. ಶೂಟಿಂಗ್
ಬಿ) ಮನು ಭಾಕರ್	II. ಜಾವೇಲಿನ್
ಸಿ) ವಿನೇಶ್ ಪೋಗಾಟ್	III. ಹಾಕಿ
ಡಿ) ಪಿ.ಆರ್ ಶ್ರೀಜೇಶ್	IV. ಕುಸ್ತಿ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)

ಬಿ) (II) (I) (IV) (III)

ಸಿ) (IV) (II) (III) (I)

ಡಿ) (III) (I) (IV) (II)

ಉತ್ತರ : ಬಿ) (II) (I) (IV) (III)

8. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 15ರಂದು ನೇಪಾಳ ದೇಶದ ಪ್ರಧಾನ ಮಂತ್ರಿಯಾಗಿ ಕೆ.ಪಿ ಶರ್ಮಾ ಓಲಿರವರು 3ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದರು.

2) ಪ್ರಸ್ತುತ ನೇಪಾಳ ದೇಶದ ಅಧ್ಯಕ್ಷರಾಗಿ ರಾಮಚಂದ್ರ ಪೌಡೆನ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

3) ಸಾರ್ಕ್‌ನ ಕೇಂದ್ರ ಕಚೇರಿ ನೇಪಾಳ ದೇಶದ ರಾಜಧಾನಿ ಕಠ್ಮಂಡು ಎಂಬ ನಗರದಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿವೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

9. ಈ ಕೆಳಗಿನ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) ಇತ್ತೀಚೆಗೆ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾದ ಮನೋಜ್ ಸೋನಿರವರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದರು, ಆದ್ದರಿಂದ ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ಸ್ಥಾನ ಖಾಲಿಯಾಗಿದೆ.

ಬಿ) 2024 ಆಗಸ್ಟ್ 1 ರಂದು ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಆಂಧ್ರಪ್ರದೇಶ ರಾಜ್ಯದ ಕೇಡರ್‌ನ 1983ನೇ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಪ್ರೀತಿ ಸೂದನ್ ರವರು ಅಧಿಕಾರ ಸ್ವೀಕರಿಸಿದರು.

ಸಿ) ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಮಾನ್ಯ ರಾಷ್ಟ್ರಪತಿಯವರು ನೇಮಕ ಮಾಡುತ್ತಾರೆ.

ಡಿ) ಸಂವಿಧಾನದ 312ನೇ ವಿಧಿ ಕೇಂದ್ರ ಲೋಕಸೇವಾ ಆಯೋಗದ ರಚನೆಗೆ ಸಂಬಂಧಿಸಿದೆ.

ಉತ್ತರ: ಡಿ) ಸಂವಿಧಾನದ 312ನೇ ವಿಧಿ ಕೇಂದ್ರ ಲೋಕಸೇವಾ ಆಯೋಗದ ರಚನೆಗೆ ಸಂಬಂಧಿಸಿದೆ.

ವಿವರಣೆ – ಸಂವಿಧಾನದ 312ನೇ ವಿಧಿ ಅಖಿಲ ಭಾರತ ಸೇವೆಗಳಿಗೆ ಸಂಬಂಧಿಸಿದೆ.

10. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಶಾಲಿನಿ ರಜನೀಶ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

2) ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮುಖ್ಯ ಕಾರ್ಯದರ್ಶಿಗಳಾಗಿ ಥೆರೆಸಾ ಭಟ್ಟಾಚಾರ್ಯ, ಡಾ॥ ಮಾಲತಿ ದಾಸ್, ಕೆ. ರತ್ನಪ್ರಭಾ, ವಂದಿತಾ ಶರ್ಮಾರವರು ಕರ್ತವ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಶಾಲಿನಿ ರಜನೀಶ್‌ರವರು 5ನೇ ಮಹಿಳಾ ಮುಖ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

3) 2024 ಜುಲೈ 31ರಂದು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್‌ರವರು ನಿವೃತ್ತಿಯಾದರು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 3 ಮಾತ್ರ ಸರಿಯಾಗಿವೆ.
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ

11. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಭಾರತದ ಭೂ ಸೇನಾ ಮುಖ್ಯಸ್ಥರಾಗಿ 2024 ಜೂನ್ 30 ರಂದು ಜನರಲ್ ಉಪೇಂದ್ರ ದ್ವಿವೇದಿರವರು ಅಧಿಕಾರ ಸ್ವೀಕರಿಸಿದರು.

2) 2024 ಆಗಸ್ಟ್ 28 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಹೊಸ ಅಧ್ಯಕ್ಷರಾಗಿ ಚೆಲ್ಲಾ ಶ್ರೀನಿವಾಸುಲು ಶೆಟ್ಟಿ ಅಧಿಕಾರ ಸ್ವೀಕರಿಸಿದ್ದಾರೆ.

3) ಕರ್ನಾಟಕ ರಾಜ್ಯದ ಚುನಾವಣಾ ಆಯುಕ್ತರಾಗಿ ಜಿಎಸ್ ಸಂಗ್ರೇಶಿರವರು ನೇಮಕವಾಗಿದ್ದಾರೆ

4) 2024 ಜೂನ್ 30 ರಿಂದ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ 3ನೇ ಬಾರಿಗೆ ಅಜಿತ್ ದೋವಾಲ್ ರವರು ನೇಮಕವಾಗಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮತ್ತು 2 ಸರಿಯಾಗಿವೆ

ಬಿ) 2 ಮಾತ್ರ ಸರಿಯಾಗಿವೆ.

ಸಿ) 1 ಮತ್ತು 3 ಸರಿಯಾಗಿವೆ.

ಡಿ) 1, 2, 3 ಮತ್ತು 4 ಸರಿಯಾಗಿವೆ.

ಉತ್ತರ: ಡಿ) 1, 2, 3 ಮತ್ತು 4 ಸರಿಯಾಗಿವೆ

12. ಈ ಕೆಳಗಿನ ನ್ಯಾಟೋ ಸಂಘಟನೆಗೆ ಸಂಬಂಧಿಸಿದಂತೆ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) ನ್ಯಾಟೋ ಸಂಘಟನೆಯ ಹೊಸ ಅಧ್ಯಕ್ಷರಾಗಿ ಮಾರ್ಕ್ ರುಟ್ಟೆರವರು ನೇಮಕವಾಗಿದ್ದಾರೆ.

ಬಿ) ನ್ಯಾಟೋ ಸಂಘಟನೆ 1949 ಏಪ್ರೀಲ್ 4 ರಂದು ಸ್ಥಾಪನೆಯಾಗಿದ್ದು ಇದರ ಕೇಂದ್ರ ಕಚೇರಿ ಬೆಲ್ಜಿಯಂ ದೇಶದ ಬ್ರುಸೆಲ್ಸ್‌ನಲ್ಲಿದೆ.

ಸಿ) ಪ್ರಸ್ತುತ ನ್ಯಾಟೋದ ಸದಸ್ಯ ರಾಷ್ಟ್ರಗಳು 32

ಡಿ) ನ್ಯಾಟೋದ 32ನೇ ಸದಸ್ಯ ರಾಷ್ಟ್ರವಾಗಿ ಫಿನ್‌ಲ್ಯಾಂಡ್ ದೇಶವು ಸೇರಿದೆ

ಉತ್ತರ: ಡಿ) ನ್ಯಾಟೋದ 32ನೇ ಸದಸ್ಯ ರಾಷ್ಟ್ರವಾಗಿ ಫಿನ್‌ಲ್ಯಾಂಡ್ ದೇಶವು ಸೇರಿದೆ

ವಿವರಣೆ – ನ್ಯಾಟೋದ 32ನೇ ಸದಸ್ಯ ರಾಷ್ಟ್ರ– ಸ್ವೀಡನ್ (2024 ಮಾರ್ಚ್ 7)

13. ಈ ಕೆಳಗಿನ ಪ್ರಮುಖ ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಹೇಳಿಕೆಗಳಲ್ಲಿ ಯಾವುದು ತಪ್ಪಾಗಿದೆ ?

ಎ) 2024ರ ಜಾಗತಿಕ ಲಿಂಗ ಅಂತರ ಸೂಚ್ಯಂಕದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಐಸ್ ಲ್ಯಾಂಡ್ ದೇಶವಿದೆ ಮತ್ತು 129ನೇ ಸ್ಥಾನದಲ್ಲಿ ಭಾರತ ದೇಶವಿದೆ.

ಬಿ) 2024ರ ಜಾಗತಿಕ ಶಕ್ತಿ ಪರಿವರ್ತನೆ ಸೂಚ್ಯಂಕದ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಸ್ವೀಡನ್ ದೇಶವಿದೆ ಮತ್ತು 63ನೇ ಸ್ಥಾನದಲ್ಲಿ ಭಾರತ ದೇಶವಿದೆ.

ಸಿ) 2023–24ನೇ ಸಾಲಿನ ಮಾನವ ಅಭಿವೃದ್ಧಿ ಸೂಚ್ಯಂಕದ ಪಟ್ಟಿಯಲ್ಲಿ ಭಾರತ 134ನೇ ಸ್ಥಾನದಲ್ಲಿದೆ.

ಡಿ) 2024ರ ಜಾಗತಿಕ ನಗರ ಸೂಚ್ಯಂಕದ ಪಟ್ಟಿಯಲ್ಲಿ ದೆಹಲಿ 450ನೇ ಸ್ಥಾನದಲ್ಲಿದೆ.

ಉತ್ತರ: ಡಿ) 2024ರ ಜಾಗತಿಕ ನಗರ ಸೂಚ್ಯಂಕದ ಪಟ್ಟಿಯಲ್ಲಿ ದೆಹಲಿ 450ನೇ ಸ್ಥಾನದಲ್ಲಿದೆ.

ವಿವರಣೆ : 2024ರ ಜಾಗತಿಕ ನಗರ ಸೂಚ್ಯಂಕದ ಪಟ್ಟಿಯಲ್ಲಿ ದೆಹಲಿ 350ನೇ ಸ್ಥಾನದಲ್ಲಿದೆ.

14. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) 18ನೇ ಲೋಕಸಭೆಯ ಹಂಗಾಮಿ ಸ್ಪೀಕರ್ – ಭರ್ತೃಹರಿ ಮಹತಾಬ್

ಬಿ) ಪ್ರಸ್ತುತ ರಾಜ್ಯಸಭೆಯ ನಾಯಕರು – ಜೆ.ಪಿ ನಡ್ಡಾ

ಸಿ) ಪ್ರಸ್ತುತ ಲೋಕಸಭೆಯ ವಿರೋಧ ಪಕ್ಷದ ನಾಯಕರು – ರಾಹುಲ್ ಗಾಂಧಿ

ಡಿ) ಒಡಿಶಾ ರಾಜ್ಯದ ಮುಖ್ಯಮಂತ್ರಿ – ಪೆಮಾ ಖಂಡು

ಉತ್ತರ: ಡಿ) ಒಡಿಶಾ ರಾಜ್ಯದ ಮುಖ್ಯಮಂತ್ರಿ – ಪೆಮಾ ಖಂಡು

ವಿವರಣೆ – ಒಡಿಶಾ ರಾಜ್ಯದ ಮುಖ್ಯಮಂತ್ರಿ – ಮೋಹನ್ ಚರಣ್ ಮಾಂಝಿ

15. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಒಡಿಶಾದ ಮುಖ್ಯಮಂತ್ರಿ	I. ಪೆಮಾ ಖಂಡು
ಬಿ) ಅರುಣಾಚಲ ಪ್ರದೇಶದ ಮುಖ್ಯಮಂತ್ರಿ	II. ಪ್ರೇಮ್ ಸಿಂಗ್ ತಮಾಂಗ್
ಸಿ) ಸಿಕ್ಕಿಂ ಮುಖ್ಯಮಂತ್ರಿ	III. ಮೋಹನ್ ಚರಣ್ ಮಾಂಝಿ
ಡಿ) ಆಂಧ್ರಪ್ರದೇಶದ ಮುಖ್ಯಮಂತ್ರಿ	IV. ಎನ್ ಚಂದ್ರಬಾಬು ನಾಯ್ಡು

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)

ಬಿ) (II) (I) (IV) (III)

ಸಿ) (IV) (II) (III) (I)

ಡಿ) (III) (I) (II) (IV)

ಉತ್ತರ : ಡಿ) (III) (I) (II) (IV)

16. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ – ಮಂಡ್ಯ

ಬಿ) ಜಿಮೆಕ್ಸ್ ಜಂಟಿ ನೌಕಾ ಸಮರಾಭ್ಯಾಸ್ – ಭಾರತ ಮತ್ತು ಜಪಾನ್

ಸಿ) ಜಿಎಸ್‌ಟಿ ಮಂಡಳಿಯ ಅಧ್ಯಕ್ಷರು – ಕೇಂದ್ರ ಗೃಹ ಸಚಿವರು

ಡಿ) ಪಂಡಿತ್ ರಾಜೀವ್ ತಾರನಾಥ್ – ಸರೋದ್ ವಾದಕರು

ಉತ್ತರ: ಸಿ) ಜಿಎಸ್‌ಟಿ ಮಂಡಳಿಯ ಅಧ್ಯಕ್ಷರು – ಕೇಂದ್ರ ಗೃಹ ಸಚಿವರು

ವಿವರಣೆ –

ಜಿಎಸ್‌ಟಿ ಮಂಡಳಿಯ ಅಧ್ಯಕ್ಷರು – ಕೇಂದ್ರ ಹಣಕಾಸು ಸಚಿವರು

17. ಜಿ–7 ರಾಷ್ಟ್ರಗಳ ಶೃಂಗ ಸಭೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) 2024 ಜೂನ್ 13 ರಿಂದ 15ರವರೆಗೆ ಜಿ–7 ರಾಷ್ಟ್ರಗಳ 50ನೇ ಶೃಂಗಸಭೆ ಇಟಲಿ ದೇಶದ ಅಪುಲಿಯಾದಲ್ಲಿ ನಡೆಯಿತು.

ಬಿ) ಜಿ–7 ರಾಷ್ಟ್ರಗಳು ಅಮೆರಿಕ, ಫ್ರಾನ್ಸ್, ಜಪಾನ್, ಕೆನಡಾ, ಬ್ರಿಟನ್, ರಷ್ಯಾ ಮತ್ತು ಇಟಲಿ

ಸಿ) 2024ರ ಜಿ–7 ರಾಷ್ಟ್ರಗಳ ಶೃಂಗಸಭೆಯಲ್ಲಿ ಉಕ್ರೇನ್ ದೇಶಕ್ಕೆ 50 ಬಿಲಿಯನ್ ಡಾಲರ್ ಸಾಲ ನೀಡಲು ನಿರ್ಧರಿಸಲಾಯಿತು.

ಡಿ) ಮುಂದಿನ ಜಿ–7 ರಾಷ್ಟ್ರಗಳ 51ನೇ ಶೃಂಗಸಭೆ ಕೆನಡಾ ದೇಶದಲ್ಲಿ ನಡೆಸಲುಉದ್ದೇಶಿಸಲಾಗಿದೆ.

ಉತ್ತರ: ಬಿ) ಜಿ–7 ರಾಷ್ಟ್ರಗಳು ಅಮೆರಿಕ, ಫ್ರಾನ್ಸ್, ಜಪಾನ್, ಕೆನಡಾ, ಬ್ರಿಟನ್, ರಷ್ಯಾ ಮತ್ತು ಇಟಲಿ

ವಿವರಣೆ –

ಜಿ–7 ರಾಷ್ಟ್ರಗಳು – ಅಮೆರಿಕ, ಫ್ರಾನ್ಸ್, ಜಪಾನ್, ಕೆನಡಾ, ಬ್ರಿಟನ್, ಜರ್ಮನಿ ಮತ್ತು ಇಟಲಿ

18. 2024ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) 2024 ಜೂನ್ 1 ರಿಂದ 29ರವರೆಗೆ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ನಲ್ಲಿ 2024ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್ ನಡೆಯಿತು.

ಬಿ) 2024ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ದೇಶವನ್ನು ಸೋಲಿಸುವುದರ ಮೂಲಕ ಚಾಂಪಿಯನ್ ಆಯಿತು.

ಸಿ) 2024ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ವಿರಾಟ್ ಕೊಹ್ಲಿರವರು ಮತ್ತು ಟೂರ್ನಿ ಶ್ರೇಷ್ಠ ಪ್ರಶಸ್ತಿಯನ್ನು ಜೆಸ್‌ಪ್ರೀತ್ ಬೂಮ್ರಾರವರು ಪಡೆದುಕೊಂಡರು.

ಡಿ) ಮುಂದಿನ 2026ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ಅನ್ನು ಬಾಂಗ್ಲಾದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ಉತ್ತರ: ಡಿ) ಮುಂದಿನ 2026ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ಅನ್ನು ಬಾಂಗ್ಲಾದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

ವಿವರಣೆ – ಮುಂದಿನ 2026ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಕ್ರಿಕೆಟ್‌ಅನ್ನು ಭಾರತ ಮತ್ತು ಶ್ರೀಲಂಕಾ ದೇಶದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

19. 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ.

ಎ) ಪ್ರತಿವರ್ಷ ಜೂನ್ 21 ಅನ್ನು ಅಂತಾರಾಷ್ಟ್ರೀಯ ಯೋಗದಿನವಾಗಿ ಆಚರಿಸಲಾಗುತ್ತದೆ.

ಬಿ) 2024 ಜೂನ್ 21 ರಂದು ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ದಾಲ್ ಸರೋವರದ ಬಳಿ ಶೇರ್–ಇ–ಕಾಶ್ಮೀರ್ ಅಂತಾರಾಷ್ಟ್ರೀಯ ಸಮ್ಮೇಳನ ಕೇಂದ್ರದಲ್ಲಿ Yog For Self and Society ಎಂಬ ಧ್ಯೇಯವಾಕ್ಯದೊಂದಿಗೆ 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಭಾಗವಹಿಸಿದ್ದರು.

ಸಿ) ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು 2014 ರಲ್ಲಿ ಆಚರಿಸಲಾಯಿತು

ಡಿ) ಮೊದಲ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 35,985 ಜನರು ಮತ್ತು 84 ದೇಶಗಳ ಗಣ್ಯರು ಭಾಗವಹಿಸಿದ್ದರು

ಉತ್ತರ: ಸಿ) ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು 2014 ರಲ್ಲಿ ಆಚರಿಸಲಾಯಿತು

ವಿವರಣೆ – ಮೊದಲ ಅಂತಾರಾಷ್ಟ್ರೀಯ ಯೋಗ ದಿನವನ್ನು 2015 ರಲ್ಲಿ ಆಚರಿಸಲಾಯಿತು.

ಕರ್ನಾಟಕ ಬಜೆಟ್ 2024–25ರ ತರಗತಿಗಳು – **Santhosh H R Sir**

https://dhronacharyaacademy.com/courses/sbv/

ಸಾಮಾನ್ಯ ಅರ್ಥಶಾಸ್ತ್ರ – 8, 9, 10 ಪ್ರಥಮ ಮತ್ತು ದ್ವಿತೀಯ ಪಿಯುಸಿ ಪಠ್ಯಕ್ರಮ ಆಧಾರಿತ 50 ಘಂಟೆಗಳ ಸಂಪೂರ್ಣ ತರಗತಿಗಳು

Mohammed Taslim Sir

https://dhronacharyaacademy.com/general-economics-1/

ಸಾಮಾನ್ಯ ಅಧ್ಯಯನ ತರಗತಿಗಳು – **ANAND SIR GK**

https://dhronacharyaacademy.com/general-knowledge/

ಇಂಗ್ಲೀಷ್ ತರಗತಿಗಳು – **K. Kattimani SIR**

https://dhronacharyaacademy.com/english/

20. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಮೇ 26ರಂದು ತಮಿಳುನಾಡು ರಾಜ್ಯದ ಚೆನ್ನೈ ನಗರದ ಎಂ.ಎ ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ 2024ರ 17ನೇ ಆವೃತ್ತಿಯ ಐಪಿಎಲ್ ಫೈನಲ್ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ತಂಡವು ಸನ್ ರೈಸರ್ಸ್ ಹೈದ್ರಾಬಾದ್ ತಂಡವನ್ನು 8 ವಿಕೆಟ್‌ಗಳಿಂದ ಸೋಲಿಸಿ ಚಾಂಪಿಯನ್‌ಶಿಪ್ ಅನ್ನು ಪಡೆದುಕೊಂಡಿತು.

2) 2024ರ 17ನೇ ಆವೃತ್ತಿಯ ಐಪಿಎಲ್ ಪಂದ್ಯದಲ್ಲಿ ಒಟ್ಟು 741 ರನ್‌ಗಳನ್ನು ಗಳಿಸುವ ಮೂಲಕ ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿರವರಿಗೆ ಆರೆಂಜ್ ಕ್ಯಾಪ್ ಅನ್ನು ನೀಡಲಾಯಿತು ಮತ್ತು ಒಟ್ಟು 24 ವಿಕೆಟಗಳನ್ನು ಪಡೆದ ಪಂಜಾಬ್ ತಂಡದ ಹರ್ಷಲ್ ಪಟೇಲ್‌ರವರಿಗೆ ಪರ್ಪಲ್ ಕ್ಯಾಪ್ ಅನ್ನು ನೀಡಲಾಯಿತು.

3) IPL - Indian Premier League.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮತ್ತು 3 ಸರಿಯಾಗಿವೆ.
ಸಿ) 1 ಮತ್ತು 3 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

21. 2024ರ ಪ್ರಯಾಣ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ ?

ಎ) 63ನೇ ಸ್ಥಾನ

ಬಿ) 64ನೇ ಸ್ಥಾನ

ಸಿ) 39ನೇ ಸ್ಥಾನ

ಡಿ) 91ನೇ ಸ್ಥಾನ

ಉತ್ತರ: ಸಿ) 39ನೇ ಸ್ಥಾನ

22. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಲಕ್ಷ್ಮೀಶ ತೋಳ್ಪಾಡಿರವರ ಕೃತಿ ಮಹಾಭಾರತ ಅನುಸಂಧಾನದ ಭಾರತಯಾತ್ರೆ ಕೃತಿಗೆ ನೀಡಲಾಗಿದೆ. ಈ ಪ್ರಶಸ್ತಿಯು 1 ಲಕ್ಷ ರೂ. ನಗದನ್ನು ಒಳಗೊಂಡಿರುತ್ತದೆ.

2) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊದಲ ಬಾರಿಗೆ 1955ರಲ್ಲಿ ರಾಷ್ಟ್ರಕವಿ ಕುವೆಂಪುರವರ ಬರೆದ ಶ್ರೀ ರಾಮಾಯಣ ದರ್ಶನಂ ಪುಸ್ತಕಕ್ಕೆ ನೀಡಲಾಗಿದೆ.

3) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಒಟ್ಟು 24 ಭಾಷೆಗಳಿಗೆ ನೀಡಲಾಗುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

23. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜನವರಿ 26ರ 75ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಫ್ರಾನ್ಸ್ ದೇಶದ ಅಧ್ಯಕ್ಷರಾದ ಇಮ್ಯಾನುಯೆಲ್ ಮ್ಯಾಕ್ರನ್‌ರವರು ಆಗಮಿಸಿದ್ದರು.

2) 2024 ಜನವರಿ 26ರ 75ನೇ ಗಣರಾಜ್ಯೋತ್ಸವದ ಸಮಾರಂಭದಲ್ಲಿ ಮೊದಲ ಸ್ಥಾನ ಪಡೆದ ಸ್ತಬ್ಧಚಿತ್ರ ಒಡಿಶಾ ರಾಜ್ಯಕ್ಕೆ ಸಂಬಂಧಿಸಿದ್ದು.

3) 2024 ಜನವರಿ 26ರ 75ನೇ ಗಣರಾಜ್ಯೋತ್ಸವದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 20 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿದ್ದವು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ.

ವಿವರಣೆ – 2024 ಜನವರಿ 26ರ 75ನೇ ಗಣರಾಜ್ಯೋತ್ಸವದಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಒಟ್ಟು 16 ಸ್ತಬ್ಧಚಿತ್ರಗಳು ಪ್ರದರ್ಶನಗೊಂಡಿದ್ದವು.

24. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ಪದ್ಮವಿಭೂಷಣ ಪ್ರಶಸ್ತಿಯನ್ನು ಕೆ.ಚಿರಂಜೀವಿ, ಎಂ. ವೆಂಕಯ್ಯನಾಯ್ಡು, ವೈಜಯಂತಿ ಮಾಲಾ ಬಾಲಿ, ಬಿಂದೇಶ್ವರ ಪಾಠಕ್, ಪದ್ಮ ಸುಬ್ರಹ್ಮಣ್ಯಂರವರಿಗೆ ನೀಡಲಾಗಿದೆ.

2) 2024ರ ಪದ್ಮಶ್ರೀ ಪ್ರಶಸ್ತಿಯನ್ನು ಪಡೆದ ಕನ್ನಡಿಗರು – ರೋಹನ್ ಬೋಪಣ್ಣ, ಡಾ॥ ಸಿ.ಆರ್ ಚಂದ್ರಶೇಖರ್, ಶಶಿ ಸೋನಿ, ಪ್ರೇಮಾ ಧನರಾಜ್, ಅನುಪಮಾ ಹೊಸಕೆರೆ, ಸೋಮಣ್ಣ, ಎಂ.ಕೆ ಶ್ರೀಧರ್, ಕೆ.ಎಸ್ ರಾಜಣ್ಣ.

3) 2024ರ ಪದ್ಮವಿಭೂಷಣ ಪ್ರಶಸ್ತಿಯನ್ನು 5 ಜನ ಗಣ್ಯರಿಗೆ, ಪದ್ಮಭೂಷಣ ಪ್ರಶಸ್ತಿಯನ್ನು 17 ಜನ ಗಣ್ಯರಿಗೆ ಮತ್ತು ಪದ್ಮಶ್ರೀ ಪ್ರಶಸ್ತಿಯನ್ನು 110 ಜನ ಗಣ್ಯರಿಗೆ ನೀಡಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

25. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023ನೇ ಸಾಲಿನ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಬ್ಯಾಡ್ಮಿಂಟನ್ ಆಟಗಾರರಾದ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿರವರಿಗೆ ನೀಡಲಾಗಿದೆ.

2) ಭಾರತದ ಕ್ರೀಡಾಕ್ಷೇತ್ರದ ಅತ್ಯುನ್ನತ ಪ್ರಶಸ್ತಿ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಯಾಗಿದೆ ಮತ್ತು ಭಾರತದ ಕ್ರೀಡಾಕ್ಷೇತ್ರದ ಎರಡನೇ ಅತ್ಯುನ್ನತ ಪ್ರಶಸ್ತಿ ಅರ್ಜುನ ಪ್ರಶಸ್ತಿಯಾಗಿದೆ.

3) ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿಯ ಮೊತ್ತ 20 ಲಕ್ಷ ರೂ.ಗಳು ಮತ್ತು ಅರ್ಜುನ ಪ್ರಶಸ್ತಿಯ ಮೊತ್ತ 10 ಲಕ್ಷ ರೂ.ಗಳು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ

ವಿವರಣೆ – ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿಯ ಮೊತ್ತ 25 ಲಕ್ಷ ರೂ.ಗಳು ಮತ್ತು ಅರ್ಜುನ ಪ್ರಶಸ್ತಿಯ ಮೊತ್ತ 15 ಲಕ್ಷ ರೂ.ಗಳು

ಸೆಪ್ಟೆಂಬರ್ ತಿಂಗಳ ಪ್ರಚಲಿತ ಘಟನೆಗಳ ತರಗತಿಗಳು–

https://www.youtube.com/live/ZvQSIAYdSSQ?si=Gql0XQJbIPtLpkGP

https://www.youtube.com/live/fH-gkesB2qY?si=sDQ54aC4XrrCKDTR

https://www.youtube.com/live/9VYgydz4NqY?si=ha592U3iGaW_vmov

https://www.youtube.com/live/faWGG_k2dT4?si=ELrzMOtd-GLzcroG

https://www.youtube.com/live/nA5ENXETz5E?si=QT71qpSFGYC4u2ie

26. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಇಟಲಿಯ ಜೆನ್ನಿಕ್ ಸಿನ್ನರ್‌ರವರು ರಷ್ಯಾದ ಡೆನಿಲ್ ಮೆಡ್ವೆಡೇವ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

2) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಬೆಲಾರಸ್ ದೇಶದ ಅರಿನಾ ಸಬಲೆಂಕಾರವರು ಚೀನಾದ ಝೆಂಗ್ ಕ್ವಿನ್ ವೆನ್ ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

3) 2024ರ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯನ್ ಮ್ಯಾಥ್ಯೂ ಎಬ್ಡೆನ್‌ರವರು ಇಟಲಿಯ ಸಿಮೋನೆ ಬೊಲೆಲ್ಲಿ ಮತ್ತು ಆಂಡ್ರಿಯಾ ವವಸ್ಸೋರಿರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

27. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್‌ರವರು ಸರ್ಬಿಯಾದ ನೊವಾಕ್ ಜೊಕೊವಿಚ್‌ರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

2) 2024ರ ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಜೆಕ್ ಗಣರಾಜ್ಯದ ಬಾರ್ಬೋರಾ ಕ್ರೆಚಿಕೋವಾರವರು ಇಟಲಿ ದೇಶದ ಜಾಸ್ಮಿನ್ ಪಾವೊಲಿನಿರವರನ್ನು ಸೋಲಿಸಿ ಪ್ರಶಸ್ತಿಯನ್ನು ಪಡೆದುಕೊಂಡರು.

3) ವಿಂಬಲ್ಡನ್ ಓಪನ್ ಟೆನ್ನಿಸ್ ಟೂರ್ನಿ ವರ್ಷದ ನಾಲ್ಕು ಗ್ರ್ಯಾಂಡ್ ಸ್ಲ್ಯಾಮ್ ಗಳಲ್ಲಿ ಅತ್ಯಂತ ಹಳೆಯದಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

28. 2024–25ರ ಕರ್ನಾಟಕ ಬಜೆಟೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ವಿಶ್ವಗುರು ಜಗಜ್ಯೋತಿ ಬಸವಣ್ಣನವರನ್ನು ಕರ್ನಾಟಕ ಸರ್ಕಾರ "ಸಾಂಸ್ಕೃತಿಕ ನಾಯಕ" ಎಂದು ಘೋಷಿಸಿದೆ. ಎಲ್ಲಾ ಸರ್ಕಾರಿ ಕಛೇರಿಗಳಲ್ಲಿರುವ ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಭಾವ ಚಿತ್ರದಲ್ಲಿ ವಿಶ್ವಗುರು ಬಸವಣ್ಣ – ಸಾಂಸ್ಕೃತಿಕ ನಾಯಕ ಎಂದು ಮುದ್ರಿಸಲಾಗುವುದು.

2) ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸಂಭ್ರಮ–50 ಅಭಿಯಾನದಡಿ "ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ" ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ವರ್ಷಪೂರ್ತಿ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಅಗತ್ಯ ಅನುದಾನ ಬಿಡುಗಡೆ ಮಾಡಲಾಗಿದೆ.

3) ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸುವ ಕ್ರೀಡಾಪಟುಗಳಿಗೆ 6 ಕೋಟಿ ರೂ.ಗಳು, ಬೆಳ್ಳಿ ಪದಕ ಪಡೆಯುವ ಕ್ರೀಡಾಪಟುಗಳಿಗೆ 4 ಕೋಟಿ ರೂ.ಗಳು ಹಾಗೂ ಕಂಚಿನ ಪದಕ ಪಡೆಯುವ ಕ್ರೀಡಾಪಟುಗಳಿಗೆ 3 ಕೋಟಿ ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು 2024–25ರ ಕರ್ನಾಟಕ ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

29. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಜುಲೈ 20 ರಂದು ಭಾರತದ ಪ್ರಸಿದ್ಧ ಟೆನ್ನಿಸ್ ಆಟಗಾರರಾದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತ್ ರಾಜ್‌ರವರನ್ನು ಟೆನ್ನಿಸ್ ಹಾಲ್ ಆಫ್ ಫೇಮ್‌ಗೆ ಅಧಿಕೃತವಾಗಿ ಸೇರ್ಪಡೆಗೊಳಿಸಲಾಗಿದೆ.

2) ಭಾರತದ ಪ್ರಸಿದ್ಧ ಟೆನ್ನಿಸ್ ಆಟಗಾರರಾದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತ್ ರಾಜ್ ರವರು ಹಾಲ್ ಆಫ್ ಫೇಮ್‌ಗೆ ಸೇರ್ಪಡೆಯಾದ ಮೊದಲಿಗರು.

3) ಇಂಟರ್‌ನ್ಯಾಷನಲ್ ಟೆನ್ನಿಸ್ ಹಾಲ್ ಆಫ್ ಫೇಮ್ ಫ್ರಾನ್ಸ್ ದೇಶದ ಪ್ಯಾರಿಸ್ ನಲ್ಲಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ.

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ

ವಿವರಣೆ – ಇಂಟರ್‌ನ್ಯಾಷನಲ್ ಟೆನ್ನಿಸ್ ಹಾಲ್ ಆಫ್ ಫೇಮ್ ಅಮೆರಿಕದ ರೋಡೆ ಐಲ್ಯಾಂಡನ್ ನ್ಯೂಪೋರ್ಟ್ ನಲ್ಲಿದೆ.

30. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024 ಆಗಸ್ಟ್ 10 ರಂದು ಫ್ರಾನ್ಸ್ ದೇಶದ ಪ್ಯಾರಿಸ್‌ನಲ್ಲಿ ನಡೆದ 142ನೇ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧಿವೇಶನದಲ್ಲಿ 2008ರಲ್ಲಿ ನಡೆದ ಬೀಜಿಂಗ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಶೂಟಿಂಗ್ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಭಾರತದ ಅಭಿನವ್ ಬಿಂದ್ರಾರವರಿಗೆ ಒಲಂಪಿಕ್ ಆರ್ಡರ್ ಗೌರವ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

2) ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಕೇಂದ್ರ ಕಚೇರಿ ಸ್ವಿಟ್ಜರ್‌ಲ್ಯಾಂಡ್ ದೇಶದ ಲಾಸನ್ನೆ ನಗರದಲ್ಲಿದೆ.

3) ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಧ್ಯಕ್ಷರಾಗಿ ಥಾಮಸ್ ಭಾಕರ್‌ವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

31. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2023 ನವೆಂಬರ್ 30 ರಿಂದ ಡಿಸೆಂಬರ್ 13ರವರೆಗೆ UNFCCC ಯ ಸಮ್ಮೇಳನದ COP – 28 ಯುಎಇಯ ದುಬೈಯಲ್ಲಿ ನಡೆಯಿತು.

2) 2024 ನವೆಂಬರ್ 11 ರಿಂದ 22ರವರೆಗೆ UNFCCC ಯ ಸಮ್ಮೇಳನದ COP –29 ಅಜರ್ ಬೈಜಾನ್ ದೇಶದ ಬಾಕುನಗರದಲ್ಲಿ ನಡೆಸಲು ಉದ್ದೇಶಿಸಲಾಗಿದೆ.

3) cop - conference of the parties.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

32. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) ಸುಪ್ರೀಂಕೋರ್ಟಿನ ಮುಖ್ಯನ್ಯಾಯಾಧೀಶರು, ಪ್ರಧಾನ ಮಂತ್ರಿ, ಲೋಕಸಭೆಯ ಸ್ಪೀಕರ್ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರನ್ನು ಒಳಗೊಂಡ ಸಮಿತಿಯ ಶಿಫಾರಸ್ಸಿನ ಮೇರೆಗೆ ಮಾನ್ಯ ರಾಷ್ಟ್ರಪತಿಯವರು ಲೋಕಪಾಲರನ್ನು ನೇಮಕ ಮಾಡುತ್ತಾರೆ.

2) ಭಾರತದ ಮೊದಲ ಲೋಕಪಾಲರಾಗಿ ಪಿನಾಕಿ ಚಂದ್ರಘೋಷ್‌ರವರು ಕರ್ತವ್ಯ ನಿರ್ವಹಿಸಿದ್ದಾರೆ.

3) ಪ್ರಸ್ತುತ ಭಾರತದ ಲೋಕಪಾಲರಾಗಿ ಅಜಯ್ ಮಾಣಿಕ್ರಾವ್ ಖಾನ್ವಿಲ್ಕರ್‌ರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

33. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ

1) 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ ಕಾರ್ಯಕ್ರಮ 2024 ಮಾರ್ಚ್ 10ರಂದು ಅಮೆರಿಕ ದೇಶದ ಕ್ಯಾಲಿಫೋರ್ನಿಯಾದ ಲಾಸ್ ಏಂಜಲೀಸನ್ ಡಾಲ್ಬಿ ಚಿತ್ರಮಂದಿರದಲ್ಲಿ ನಡೆಯಿತು.

2) 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ ಕಾರ್ಯಕ್ರಮದಲ್ಲಿ ಅತ್ಯುತ್ತಮ ಚಲನಚಿತ್ರ ಓಪನ್ ಹೈಮರ್, ಅತ್ಯುತ್ತಮ ನಟ ಸಿಲಿಯನ್ ಮರ್ಫಿ, ಅತ್ಯುತ್ತಮ ನಟಿ ಎಮ್ಮಾ ಸ್ಟೋನ್, ಅತ್ಯುತ್ತಮ ನಿರ್ದೇಶಕ ಕ್ರಿಸ್ಟೋಫರ್ ನೋಲನ್ ರವರಿಗೆ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

3) 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಪ್ರಶಸ್ತಿಗಳನ್ನು ಪೂರ್ ಥಿಂಗ್ಸ್ ಚಲನಚಿತ್ರವು ಪಡೆದುಕೊಂಡಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ.

ವಿವರಣೆ – 2024ರ 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಪ್ರಶಸ್ತಿಗಳನ್ನು ಓಪನ್ ಹೈಮರ್(7 ವಿಭಾಗದಲ್ಲಿ) ಚಲನಚಿತ್ರವು ಪಡೆದುಕೊಂಡಿತು.

34. 2024–25ರ ಕರ್ನಾಟಕ ಬಜೆಟೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024–25ರ ಕರ್ನಾಟಕ ಬಜೆಟ್ ಅನ್ನು ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು 2024 ಫೆಬ್ರುವರಿ 16 ರಂದು ಮಂಡಿಸಿದರು.

2) 2024–25ರ ಕರ್ನಾಟಕ ಬಜೆಟನ್ ಒಟ್ಟು ಗಾತ್ರ 3,71,383 ಕೋಟಿ ರೂ.

3) ಪರಿಷ್ಕೃತ ಪ್ರವಾಸೋದ್ಯಮ ನೀತಿ 2024–2029.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

35. 2023ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2023ನೇ ಸಾಲಿನ 33ನೇ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಮಲೆಯಾಳಂ ಲೇಖಕ ಪ್ರಭಾವರ್ಮಾರವರ ರೌದ್ರ ಸಾತ್ವಿಕಂ ಕೃತಿಗೆ ನೀಡಲಾಗಿದೆ.

2) 2010ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಕರ್ನಾಟಕದ ಎಸ್.ಎಲ್ ಭೈರಪ್ಪರವರ ಮಂದ್ರಾ ಕಾದಂಬರಿಗೆ ನೀಡಲಾಗಿದೆ.

3) 2014ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಕರ್ನಾಟಕದ ಎಂ ವೀರಪ್ಪ ಮೊಯ್ಲಿರವರ ಶ್ರೀ ರಾಮಾಯಣ ಮಹಾನ್ವೇಷಣಂ ಕೃತಿಗೆ ನೀಡಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

36. 2024ನೇ ಸಾಲಿನ ಅಬೆಲ್ ಪ್ರಶಸ್ತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024ನೇ ಸಾಲಿನ ಅಬೆಲ್ ಪ್ರಶಸ್ತಿಯನ್ನು ಫ್ರಾನ್ಸ್ ದೇಶದ ಗಣಿತ ತಜ್ಞ ಮೈಕೆಲ್ ತಲಗ್ರಾಂಡ್ ರವರಿಗೆ ಪ್ರಧಾನ ಮಾಡಲಾಗಿದೆ.
2) ಅಬೆಲ್ ಪ್ರಶಸ್ತಿಯನ್ನು ಗಣಿತ ಶಾಸ್ತ್ರದ ನೊಬೆಲ್ ಎಂದು ಕರೆಯುತ್ತಾರೆ.
3) ಅಬೆಲ್ ಪ್ರಶಸ್ತಿಯನ್ನು ಅಮೆರಿಕ ದೇಶವು ನೀಡುತ್ತದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ

ವಿವರಣೆ – ಅಬೆಲ್ ಪ್ರಶಸ್ತಿಯನ್ನು ನಾರ್ವೆ ದೇಶವು ನೀಡುತ್ತದೆ.

37. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು 2006 ಫೆಬ್ರುವರಿ 2 ರಂದು ಆಂಧ್ರಪ್ರದೇಶ ರಾಜ್ಯದ ಅನಂತಪುರ ಜಿಲ್ಲೆಯಲ್ಲಿ ಅಂದಿನ ಭಾರತದ ಪ್ರಧಾನ ಮಂತ್ರಿ ಡಾ॥ ಮನಮೋಹನ್ ಸಿಂಗ್ ಮತ್ತು ಯುಪಿಎ ಅಧ್ಯಕ್ಷ ಶ್ರೀಮತಿ ಸೋನಿಯಾ ಗಾಂಧಿರವರು ಚಾಲನೆ ನೀಡಿದ್ದರು. ಇದರ ನೆನಪಿಗಾಗಿ ಫೆಬ್ರುವರಿ 2ನ್ನು ಪ್ರತಿ ವರ್ಷ ನರೇಗಾ ದಿನ ಎಂದು ಆಚರಿಸಲಾಗುತ್ತದೆ.

2) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ 2009 ಅಕ್ಟೋಬರ್ 2 ರಂದು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂದು ಮರುನಾಮಕರಣ ಮಾಡಲಾಗಿದೆ.

3) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕರ್ನಾಟಕದಲ್ಲಿ ದಿನಕ್ಕೆ ಕೂಲಿ ದರ 316 ರೂಪಾಯಿ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ

ವಿವರಣೆ – ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕರ್ನಾಟಕದಲ್ಲಿ ದಿನಕ್ಕೆ ಕೂಲಿ ದರ 349 ರೂಪಾಯಿ.

38. 2024ರ ವಿಶ್ವ ಸಂತೋಷ ಸೂಚ್ಯಂಕಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024ರ ವಿಶ್ವ ಸಂತೋಷ ಸೂಚ್ಯಂಕದ 143 ದೇಶಗಳ ಪಟ್ಟಿಯಲ್ಲಿ ಭಾರತವು 126ನೇ ಸ್ಥಾನದಲ್ಲಿದೆ.

2) 2024ರ ವಿಶ್ವ ಸಂತೋಷ ಸೂಚ್ಯಂಕದ 143 ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಫಿನ್‌ಲ್ಯಾಂಡ್, 2ನೇ ಸ್ಥಾನದಲ್ಲಿ ಡೆನ್ಮಾರ್ಕ್, 3ನೇ ಸ್ಥಾನದಲ್ಲಿ ಐಸ್‌ಲ್ಯಾಂಡ್, 4ನೇ ಸ್ಥಾನದಲ್ಲಿ ಸ್ವೀಡನ್ ಮತ್ತು 5ನೇ ಸ್ಥಾನದಲ್ಲಿ ಇಸ್ರೇಲ್ ದೇಶಗಳಿವೆ.

3) 2024ರ ವಿಶ್ವ ಸಂತೋಷ ಸೂಚ್ಯಂಕದ 143 ದೇಶಗಳ ಪಟ್ಟಿಯಲ್ಲಿ 143ನೇ ಸ್ಥಾನದಲ್ಲಿ ಅಫ್ಘಾನಿಸ್ತಾನ ದೇಶವಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ

39. ಮಿಸ್ ವರ್ಲ್ಡ್ ಪ್ರಶಸ್ತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಮಾರ್ಚ್ 9 ರಂದು ನಡೆದ 71ನೇ ಆವೃತ್ತಿಯ ಮಿಸ್ ವರ್ಲ್ಡ್ ಸ್ಪರ್ಧೆಯ ಅಂತಿಮ ಸುತ್ತಿನ ಆಯ್ಕೆ ಕಾರ್ಯಕ್ರಮವು ಮಹಾರಾಷ್ಟ್ರ ರಾಜ್ಯದ ಮುಂಬೈ ನಗರದ ಜಿಯೋ ವರ್ಲ್ಡ್ ಕನ್ವನ್ಷನ್ ಸೆಂಟರ್ ನಲ್ಲಿ ನಡೆಯಿತು.

2) 2024ನೇ ಸಾಲಿನ 71ನೇ ಆವೃತ್ತಿಯ ಮಿಸ್ ವರ್ಲ್ಡ್ ಆಗಿ ಜೆಕ್ ಗಣರಾಜ್ಯದ ಕ್ರಿಸ್ಟಿನಾ ಫಿಜ್ಕೋವಾರವರು ಆಯ್ಕೆಯಾದರು.

3) ಮಿಸ್ ವರ್ಲ್ಡ್ ಪ್ರಶಸ್ತಿ ಪಡೆದ ಭಾರತೀಯರು ರೀಟಾ ಫರಿಯಾ (1966), ಐಶ್ವರ್ಯ ರೈ (1994) ಡಯಾನಾ ಹೇಡನ್ (1997), ಯುಕ್ತಾ ಮುಖಿ (1999), ಪ್ರಿಯಾಂಕ ಚೋಪ್ರಾ (2000), ಮಾನುಷಿ ಚಿಲ್ಲರ್ (2017)

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

40. ಕೇಂದ್ರ ಚುನಾವಣಾ ಆಯೋಗಕ್ಕೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಸಂವಿಧಾನದ 324ನೇ ವಿಧಿಯಲ್ಲಿ ಕೇಂದ್ರ ಚುನಾವಣಾ ಆಯೋಗದ ಸಂರಚನೆಗೆ ಸಂಬಂಧಿಸಿದ ಮಾಹಿತಿ ಇದೆ.

2) ಪ್ರಸ್ತುತ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾಗಿ ರಾಜೀವ್ ಕುಮಾರ್‌ರವರು ಮತ್ತು ಇತರ ಆಯುಕ್ತರಾಗಿ ಜ್ಞಾನೇಶ್ ಕುಮಾರ್ ಮತ್ತು ಸುಖಬೀರ್ ಸಂಧುರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ

3) ಕೇಂದ್ರ ಚುನಾವಣಾ ಆಯೋಗದ ಮೊದಲ ಮಹಿಳಾ ಮುಖ್ಯ ಚುನಾವಣಾ ಆಯುಕ್ತೆಯಾಗಿ ಸುಚೇತ ಕೃಪಲಾನಿರವರು ಸೇವೆ ಸಲ್ಲಿಸಿದ್ದಾರೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಸಿ) 1 ಮತ್ತು 2 ಸರಿಯಾಗಿವೆ

ಕೇಂದ್ರ ಚುನಾವಣಾ ಆಯೋಗದ ಮೊದಲ ಮಹಿಳಾ ಮುಖ್ಯ ಚುನಾವಣಾ ಆಯುಕ್ತೆಯಾಗಿ ವಿ.ಎಸ್ ರಮಾದೇವಿರವರು ಸೇವೆ ಸಲ್ಲಿಸಿದ್ದಾರೆ.

41. 2024ರ 2ನೇ ಆವೃತ್ತಿಯ ಡಬ್ಲ್ಯೂಪಿಎಲ್ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಮಾರ್ಚ್ 17ರಂದು ನವದೆಹಲಿಯಲ್ಲಿರುವ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಡಬ್ಲ್ಯೂಪಿಎಲ್ 2ನೇ ಆವೃತ್ತಿಯಲ್ಲಿ ದೆಹಲಿ ಕ್ಯಾಪಿಟಲ್ಸ್ ತಂಡವನ್ನು ಸ್ಮೃತಿ ಮಂದಾನಾ ನಾಯಕತ್ವದ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡವು 8 ವಿಕೆಟಗಳಿಂದ ಸೋಲಿಸಿ ಮೊದಲ ಬಾರಿಗೆ ಟ್ರೋಫಿ ಗೆದ್ದುಕೊಂಡಿತು.

2) 2024ರ ಡಬ್ಲ್ಯೂಪಿಎಲ್ 2ನೇ ಆವೃತ್ತಿಯಲ್ಲಿ 347 ರನ್ ಗಳಿಸಿದ ಆರ್‌ಸಿಬಿ ತಂಡದ ಎಲ್ಲಿಸ್ ಪೆರ್ರಿ ರವರಿಗೆ ಆರೆಂಜ್ ಕ್ಯಾಪ್ ಪ್ರಶಸ್ತಿ ನೀಡಲಾಯಿತು.

3) 2024ರ ಡಬ್ಲ್ಯೂಪಿಎಲ್ 2ನೇ ಆವೃತ್ತಿಯಲ್ಲಿ 13 ವಿಕೆಟ್ ಗಳಿಸಿದ ಆರ್‌ಸಿಬಿ ತಂಡದ ಶ್ರೇಯಾಂಕಾ ಪಾಟೀಲ್ ರವರಿಗೆ ಪರ್ಪಲ್ ಕ್ಯಾಪ್ ಪ್ರಶಸ್ತಿ ನೀಡಲಾಯಿತು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

42. ಭಾರತ ರತ್ನ ಪ್ರಶಸ್ತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಭಾರತ ರತ್ನ ಪ್ರಶಸ್ತಿಯು ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ.

2) 2024ರಲ್ಲಿ ಭಾರತ ರತ್ನ ಪ್ರಶಸ್ತಿಗೆ ಬಿಹಾರ ರಾಜ್ಯದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್, ಮಾಜಿ ಉಪಪ್ರಧಾನಿ ಎಲ್ ಕೆ ಅಡ್ವಾಣಿ, ಮಾಜಿ ಪ್ರಧಾನ ಮಂತ್ರಿಗಳಾದ ಚೌಧರಿ ಚರಣ್ ಸಿಂಗ್, ಪಿ.ವಿ ನರಸಿಂಹರಾವ್ ಮತ್ತು ಹಸಿರು ಕ್ರಾಂತಿಯ ಪಿತಾಮಹ ಡಾ॥ ಎಮ್.ಎಸ್ ಸ್ವಾಮಿನಾಥನ್ ರವರನ್ನು ಆಯ್ಕೆಮಾಡಲಾಗಿದೆ.

3) ಭಾರತ ರತ್ನ ಪ್ರಶಸ್ತಿಯನ್ನು ಇದುವರೆಗೂ 55 ಮಹಾನೀಯರಿಗೆ ನೀಡಲಾಗಿದೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1 ಮತ್ತು 2 ಸರಿಯಾಗಿವೆ

ವಿವರಣೆ –

ಭಾರತ ರತ್ನ ಪ್ರಶಸ್ತಿಯನ್ನು ಇದುವರೆಗೂ 53 ಮಹಾನೀಯರಿಗೆ ನೀಡಲಾಗಿದೆ.

43. ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಸುಪ್ರೀಂಕೋರ್ಟ್‌ನ 51ನೇ ಮುಖ್ಯ ನ್ಯಾಯಾಧೀಶರಾಗಿ ನ್ಯಾ॥ ಸಂಜೀವ್ ಖನ್ನಾರವರು 2024 ನವೆಂಬರ್ 11 ರಂದು ಪ್ರಮಾಣ ವಚನ ಸ್ವೀಕರಿಸಿದರು.

2) ಪ್ರಸ್ತುತ ಕರ್ನಾಟಕ ಹೈಕೋರ್ಟಿನ ಮುಖ್ಯನ್ಯಾಯಾಧೀಶರಾಗಿ ನ್ಯಾ॥ ಎನ್.ವಿ ಅಂಜಾರಿಯಾರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

3) 18ನೇ ಲೋಕಸಭೆಯ ಸಭಾಪತಿಗಳಾಗಿ ಓಂ ಬಿರ್ಲಾರವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

44. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) ನೀತಿ ಆಯೋಗದ ಉಪಾಧ್ಯಕ್ಷರು – ಸುಮನ್ ಕೆ ಬೆರಿ

ಬಿ) ಕಂಪ್ಟ್ರೋಲರ್ & ಅಡಿಟರ್ ಜನರಲ್ – ಗಿರೀಶ್ ಚಂದ್ರಮುರ್ಮು

ಸಿ) ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು – ಮಲ್ಲಿಕಾರ್ಜುನ ಖರ್ಗೆ

ಡಿ) ರಾಜ್ಯಸಭೆಯ ಅಧ್ಯಕ್ಷರು – ಪ್ರಧಾನ ಮಂತ್ರಿ

ಉತ್ತರ: ಡಿ) ರಾಜ್ಯಸಭೆಯ ಅಧ್ಯಕ್ಷರು – ಪ್ರಧಾನ ಮಂತ್ರಿ

ವಿವರಣೆ – ರಾಜ್ಯಸಭೆಯ ಅಧ್ಯಕ್ಷರು – ಉಪರಾಷ್ಟ್ರಪತಿ

45. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) ಕೇಂದ್ರದ ಗೃಹಸಚಿವರು – ಅಮಿತ್ ಷಾ

ಬಿ) ಭಾರತದ ರಕ್ಷಣಾ ಸಚಿವರು – ರಾಜನಾಥ್ ಸಿಂಗ್

ಸಿ) ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು – ಧರ್ಮೇಂದ್ರ ಪ್ರಧಾನ್

ಡಿ) ಕೇಂದ್ರದ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವರು – ಹೆಚ್.ಡಿ ಕುಮಾರ ಸ್ವಾಮಿ

ಉತ್ತರ: ಸಿ) ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು – ಧರ್ಮೇಂದ್ರ ಪ್ರಧಾನ್

ವಿವರಣೆ –

ಕೇಂದ್ರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವರು – ಶಿವರಾಜ್ ಸಿಂಗ್ ಚೌಹಾಣ್

46. 2024 ವಿಶ್ವ ಅಭಿವೃದ್ಧಿ ವರದಿಯಲ್ಲಿ ಅತಿ ಹೆಚ್ಚು ತಲಾ ಆದಾಯ ಹೊಂದಿರುವ ದೇಶ ಯಾವುದು ?

ಎ) ಚೀನಾ

ಬಿ) ಅಮೆರಿಕ

ಸಿ) ಭಾರತ

ಡಿ) ಜಪಾನ್

ಉತ್ತರ: ಡಿ) ಅಮೆರಿಕ

ವಿವರಣೆ – 2024ರ ಜಾಗತಿಕ ಅಭಿವೃದ್ಧಿ ವರದಿಯನ್ನು ವಿಶ್ವ ಬ್ಯಾಂಕ್ 2024 ಆಗಸ್ಟ್ 6ರಂದು "ಮಧ್ಯಮ ಆದಾಯದ ಬಲೆ" ಎಂಬ ಧ್ಯೇಯವಾಕ್ಯದೊಂದಿಗೆ ಬಿಡುಗಡೆ ಮಾಡಿದೆ. ಈ ವರದಿಯಲ್ಲಿ ವಿಶ್ವದಲ್ಲಿ ಅತಿ ಹೆಚ್ಚು ತಲಾ ಆದಾಯ ಹೊಂದಿದ ದೇಶ ಅಮೆರಿಕ.
(ಅಮೆರಿಕದ ತಲಾ ಆದಾಯ 37,683 ಡಾಲರ್, ಅಥವಾ ₹ 31,57,737.42)
(ಭಾರತದ ತಲಾ ಆದಾಯ 2022ರ ಪ್ರಕಾರ ₹ 2,00,275)

ವಿಶೇಷವಾಗಿ ಗಮನಿಸಿ –

ಅಮೆರಿಕದ ತಲಾ ಆದಾಯದ ಕಾಲು ಭಾಗವನ್ನು ತಲುಪಲು ಭಾರತಕ್ಕೆ ಸುಮಾರು 75 ವರ್ಷಗಳು ಬೇಕಾಗಬಹುದು. ಭಾರತದ ಪ್ರತಿಸ್ಪರ್ಧಿ ಚೀನಾ ಪ್ರಯತ್ನಿಸಿದರೆ ಇನ್ನೂ ಹತ್ತು ವರ್ಷಗಳಲ್ಲಿ ಅಮೆರಿಕದ ತಲಾ ಆದಾಯದ ಕಾಲು ಭಾಗ ತಲುಪುವ ಸಾಧ್ಯತೆ ಇದೆ ಎಂದು ವರದಿ ತಿಳಿಸಿದೆ.

47. ಈ ಕೆಳಕಂಡ ಯಾವ ಜೋಡಣೆ ತಪ್ಪಾಗಿದೆ ?

ಎ) ಅಂತರಾಷ್ಟ್ರೀಯ ಯೋಗ ದಿನ – ಜೂನ್ 21

ಬಿ) ವಿಶ್ವ ಪರಿಸರ ದಿನ – ಜೂನ್ 5

ಸಿ) ವಿಶ್ವ ಜಲಶಾಸ್ತ್ರ ದಿನ – ಜೂನ್ 21

ಡಿ) ವಿಶ್ವ ಜಲ ದಿನ – ಮಾರ್ಚ್ 21

ಉತ್ತರ: ಡಿ) ವಿಶ್ವ ಜಲ ದಿನ – ಮಾರ್ಚ್ 21

ವಿವರಣೆ –

ವಿಶ್ವ ಜಲ ದಿನ – ಮಾರ್ಚ್ 22

48. ಭಾರತದಲ್ಲಿ ಚಿರತೆಗಳ ಸ್ಥಿತಿಗತಿಯ ವರದಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಫೆಬ್ರುವರಿ 29 ರಂದು ಕೇಂದ್ರ ಪರಿಸರ, ಅರಣ್ಯ, ಹವಾಮಾನ ಬದಲಾವಣೆ ಸಚಿವರಾದ ಭೂಪೇಂದರ್ ಯಾದವ್ ರವರು ಭಾರತದಲ್ಲಿ ಚಿರತೆಗಳ ಸ್ಥಿತಿಗತಿ ವರದಿಯನ್ನು ನವದೆಹಲಿಯಲ್ಲಿ ಬಿಡುಗಡೆ ಮಾಡಿದರು.

2) 2022ರ ಚಿರತೆಗಳ ವರದಿಯಲ್ಲಿ ಮಧ್ಯಪ್ರದೇಶ ರಾಜ್ಯವು 3,907 ಚಿರತೆಗಳನ್ನು ಹೊಂದುವ ಮೂಲಕ ಭಾರತದಲ್ಲಿ ಅತಿ ಹೆಚ್ಚು ಚಿರತೆಗಳನ್ನು ಹೊಂದಿದ ರಾಜ್ಯವಾಗಿದೆ. ನಂತರ ಮಹಾರಾಷ್ಟ್ರ ರಾಜ್ಯವು 1,985 ಚಿರತೆಗಳನ್ನು ಹೊಂದುವ ಮೂಲಕ 2ನೇ ಸ್ಥಾನದಲ್ಲಿದೆ ಮತ್ತು ಕರ್ನಾಟಕ ರಾಜ್ಯವು 1,879 ಚಿರತೆಗಳನ್ನು ಹೊಂದುವ ಮೂಲಕ 3ನೇ ಸ್ಥಾನದಲ್ಲಿದೆ.

3) 2022ರ ಚಿರತೆಗಳ ವರದಿಯ ಪ್ರಕಾರ ಭಾರತದಲ್ಲಿ ಒಟ್ಟು 13,874 ಚಿರತೆಗಳಿವೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.
ಬಿ) 2 ಮಾತ್ರ ಸರಿಯಾಗಿದೆ..
ಸಿ) 1 ಮತ್ತು 2 ಸರಿಯಾಗಿವೆ.
ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

49. ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಏನೆಂದು ಮರುನಾಮಕರಣ ಮಾಡಲಾಗಿದೆ ?

ಎ) ಮಾಹಿತಿ ಕೇಂದ್ರ

ಬಿ) ತರಬೇತಿ ಕೇಂದ್ರ

ಸಿ) ಅರಿವು ಕೇಂದ್ರ

ಡಿ) ಜ್ಞಾನ ಕೇಂದ್ರ

ಉತ್ತರ: ಸಿ) ಅರಿವು ಕೇಂದ್ರ

ದ್ರೋಣಾಚಾರ್ಯ ಅಕಾಡೆಮಿಗೆ ಸ್ವಾಗತ

https://dhronacharyaacademy.com/

50. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ರಾಷ್ಟ್ರೀಯ ಕೈಮಗ್ಗ ದಿನ	I. ಫೆಬ್ರುವರಿ 28
ಬಿ) ಬಾಹ್ಯಾಕಾಶ ದಿನ	II. ಆಗಸ್ಟ್ 23
ಸಿ) ರಾಷ್ಟ್ರೀಯ ವಿಜ್ಞಾನ ದಿನ	III. ಜನವರಿ 15
ಡಿ) ಭೂಸೇನಾ ದಿನ	IV. ಆಗಸ್ಟ್ 7

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (I) (III)
ಡಿ) (III) (I) (II) (IV)

ಉತ್ತರ : ಸಿ) (IV) (II) (I) (III)

51. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಅಂಶುಮಾನ್ ಗಾಯಕ್ ವಾಡ್	I. ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ
ಬಿ) ಬುದ್ಧದೇವ್ ಭಟ್ಟಾಚಾರ್ಯ	II. ಕ್ರಿಕೆಟ್ ಆಟಗಾರರು
ಸಿ) ಯಾಮಿನಿ ಕೃಷ್ಣಮೂರ್ತಿ	III. ಪ್ರಸಿದ್ಧ ನಿರೂಪಕಿ
ಡಿ) ಅಪರ್ಣಾ	IV. ಭರತನಾಟ್ಯ, ಕುಚಿಪುಡಿ

ಕೆಳಗೆ ಕೊಟ್ಟಿರುವ ಕೋಡಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (I) (III)
ಡಿ) (III) (I) (II) (IV)

ಉತ್ತರ : ಬಿ) (II) (I) (IV) (III)

52. ಆನೆ ಯೋಜನೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಆನೆ ಯೋಜನೆ ಪ್ರಾರಂಭವಾಗಿದ್ದು 1992 ರಿಂದ ಮತ್ತು ವಿಶ್ವ ಆನೆ ದಿನವನ್ನು 2012 ರಿಂದ ಪ್ರತಿ ವರ್ಷ ಆಗಸ್ಟ್ 12 ಅನ್ನು ಆಚರಿಸಲಾಗುತ್ತದೆ.

2) 2022 ಆನೆ ಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಟ್ಟು 6,395 ಆನೆಗಳಿವೆ (2017ರ ಗಣತಿಯ ಪ್ರಕಾರ ಕರ್ನಾಟಕದಲ್ಲಿ 6,049 ಆನೆಗಳಿದ್ದವು)

3) ಭಾರತದಲ್ಲಿ ಅತಿ ಹೆಚ್ಚು ಆನೆಗಳು ರಾಜ್ಯಗಳು ಅನುಕ್ರಮವಾಗಿ ಕರ್ನಾಟಕ, ಅಸ್ಸಾಂ, ಕೇರಳ ಮತ್ತು ತಮಿಳುನಾಡು.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮಾತ್ರ ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

53. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಆಪರೇಷನ್ ಕಾವೇರಿ	I. ಇಸ್ರೇಲ್ ಮತ್ತು ಹಮಾಸ್
ಬಿ) ಆಪರೇಷನ್ ಅಜಯ್	II. ರಷ್ಯಾ ಮತ್ತು ಉಕ್ರೇನ್
ಸಿ) ಅಪರೇಷನ್ ಗಂಗಾ	III. ಸೂಡಾನ್
ಡಿ) ಅಪರೇಷನ್ ದೋಸ್ತ್	IV. ಟರ್ಕಿ ಮತ್ತು ಸಿರಿಯಾ

ಕೆಳಗೆ ಕೊಟ್ಟಿರುವ ಕೋಡ್‌ಅನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

ಎ) (I) (II) (III) (IV)
ಬಿ) (II) (I) (IV) (III)
ಸಿ) (IV) (II) (I) (III)
ಡಿ) (III) (I) (II) (IV)

ಉತ್ತರ : ಡಿ) (III) (I) (II) (IV)

54. ಅರ್ಜುನ ಪ್ರಶಸ್ತಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) ಅರ್ಜುನ ಪ್ರಶಸ್ತಿಯನ್ನು 1961ರಲ್ಲಿ ಸ್ಥಾಪಿಸಲಾಗಿದೆ ಮತ್ತು ಈ ಪ್ರಶಸ್ತಿಯು ಭಾರತದ ಕ್ರೀಡಾಕ್ಷೇತ್ರದ ಅತಿ ದೊಡ್ಡ ಪ್ರಶಸ್ತಿಯಾಗಿದೆ.

2) ಅರ್ಜುನ ಪ್ರಶಸ್ತಿಯ ಮೊತ್ತ 15 ಲಕ್ಷ ರೂ.

3) 2023ನೇ ಸಾಲಿನ ಅರ್ಜುನ ಪ್ರಶಸ್ತಿಯನ್ನು ಪಡೆದ ಪ್ರಮುಖರು ಮೊಹಮ್ಮದ್ ಶಮಿ(ಕ್ರಿಕೆಟ್), ಶೀತಲ್ ದೇವಿ (ಪ್ಯಾರಾ–ಆರ್ಚರಿ) ಅಂತಿಮ್ ಪಂಘಲ್ (ಕುಸ್ತಿ) ಮುಂತಾದವರು

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮತ್ತು 3 ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಬಿ) 2 ಮತ್ತು 3 ಸರಿಯಾಗಿದೆ..

ವಿವರಣೆ –

ಭಾರತದ ಕ್ರೀಡಾಕ್ಷೇತ್ರದ ಅತಿ ದೊಡ್ಡ ಪ್ರಶಸ್ತಿ – ಮೇಜರ್ ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿ

55. ಮೂನ್ ಸ್ನೈಪರ್ ನೌಕೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2023 ಸೆಪ್ಟೆಂಬರ್ 6 ರಂದು ಜಪಾನ್ ದೇಶದ ಬಾಹ್ಯಾಕಾಶ ಸಂಸ್ಥೆಯಾದ ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ ಏಜೆನ್ಸಿ (JAXA) ತನೇಗಾಶಿಮಾ ಬಾಹ್ಯಾಕಾಶ ಕೇಂದ್ರ ಉಡಾವಣೆ ಮಾಡಿತ್ತು.

2) 2024 ಜನವರಿ 19 ರಂದು ಮೂನ್ ಸ್ನೈಪರ್ ನೌಕೆಯು ಚಂದ್ರನ ಮೇಲೆ ಇಳಿಯಿತು.

3) ಚಂದ್ರನ ಮೇಲೆ ನೌಕೆ ಇಳಿಸಿದ ದೇಶಗಳು ಭಾರತ, ಅಮೆರಿಕ, ಚೀನಾ, ರಷ್ಯಾ ಮತ್ತು ಜಪಾನ್

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ. ಬಿ) 2 ಮತ್ತು 3 ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ. ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

56. ಹಿಮ ಚಿರತೆಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ.

1) 2024 ಜನವರಿ 30 ರಂದು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸಭೆಯಲ್ಲಿ ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಭೂಪೇಂದರ್ ಯಾದವ್ ರವರು ಭಾರತದಲ್ಲಿ ಹಿಮಚಿರತೆಗಳ ಕುರಿತಾದ ವರದಿಯನ್ನು ಬಿಡುಗಡೆ ಮಾಡಿದರು.

2) 2024ರ ವರದಿಯ ಪ್ರಕಾರ ಭಾರತದಲ್ಲಿ ಒಟ್ಟು 718 ಹಿಮ ಚಿರತೆಗಳಿವೆ.

3) ಕೇಂದ್ರಾಡಳಿತ ಪ್ರದೇಶವಾದ ಲಡಾಕ್‌ನಲ್ಲಿ 477 ಹಿಮ ಚಿರತೆಗಳು, ಉತ್ತರಾಖಂಡ್ ರಾಜ್ಯದಲ್ಲಿ 124 ಹಿಮ ಚಿರತೆಗಳು, ಹಿಮಾಚಲ ಪ್ರದೇಶ ರಾಜ್ಯದಲ್ಲಿ 51 ಹಿಮ ಚಿರತೆಗಳಿವೆ ಎಂದು ವರದಿಯಲ್ಲಿ ಉಲ್ಲೇಖವಾಗಿವೆ.

ಮೇಲೆ ನೀಡಿರುವ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ ?

ಎ) 1 ಮಾತ್ರ ಸರಿಯಾಗಿದೆ.

ಬಿ) 2 ಮತ್ತು 3 ಸರಿಯಾಗಿದೆ..

ಸಿ) 1 ಮತ್ತು 2 ಸರಿಯಾಗಿವೆ.

ಡಿ) 1, 2 ಮತ್ತು 3 ಸರಿಯಾಗಿವೆ.

ಉತ್ತರ: ಡಿ) 1, 2 ಮತ್ತು 3 ಸರಿಯಾಗಿವೆ.

57. ಪಟ್ಟಿ I ಮತ್ತು ಪಟ್ಟಿ II ಅನ್ನು ಹೊಂದಿಸಿ ಮತ್ತು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿರುವ ಕೋಡ್‌ಅನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

ಪಟ್ಟಿ – I	ಪಟ್ಟಿ – II
ಎ) ಕರ್ನಾಟಕದ ಗಾಂಧಿ	I. ಹಡ್ಗೇಕರ್ ಮಂಜಪ್ಪ
ಬಿ) ಕನ್ನಡದ ಕುಲಪರೋಹಿತ	II. ಆಲೂರು ವೆಂಕಟರಾಯರು
ಸಿ) ಕರ್ನಾಟಕದ ಉಕ್ಕಿನ ಮನುಷ್ಯ	III. ಹಳ್ಳಿಕೇರಿ ಗುದ್ಲೆಪ್ಪ
